# ಅನ್ವೇಷಣೆ

ಅ) ಕೆಳಗೆ ನೀಡಿರುವ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ. (Complete the poem lines)

೧. ಎಲ್ಲೋ ಹುಡುಕಿದೆ ಇಲ್ಲದ ದೇವರ ...................... ಗುಡಿಯೊಳಗೆ.

೨. ಎಷ್ಟು ಕಷ್ಟವೋ ..................... ಎಂಬುದು ನಾಲ್ಕು ದಿನದ ಈ ಬದುಕಿನಲ್ಲಿ.

೩. ಹತ್ತಿರವಿದ್ದೂ ……………… ನಿಲ್ಲುವೆವು.

೪. ಒಳಗಿನ ತಿಳಿಯನು ತಲಕದೆ ಇದ್ದರೆ .................... ನಾಲಗೆಗೆ.

ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer the following in one sentence)

೧. ನಂದನ ಮತ್ತು ಬಂಧನ ಎಂದರೇನು?

೨. ಕವಿ ಜಿ ಎಸ್ ಶಿವರುದ್ರಪ್ಪನವರು ಮೊದಲು ದೇವರನ್ನು ಎಲ್ಲಿ ಹುಡುಕಿ ವಿಫಲರಾದರು?

೩. ಮಾನವನಲ್ಲಿ ಅಹಂ ತುಂಬಿದಾಗ ಹೇಗೆ ವರ್ತಿಸುತ್ತಾನೆ?

೪. ಅಮೃತದ ಸವಿ ನಾಲಿಗೆಗೆ ಯಾವಾಗ ಸಿಗುತ್ತದೆ?

ಇ) ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. (Answer the following in 3-4 sentences)

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೧. ಕವಿ ಹೇಳುವಂತೆ ಬದುಕಿನಲ್ಲಿ ಯಾವುದು ಕಷ್ಟ? ಅದನ್ನು ಪಡೆಯುವದು ಹೇಗೆ?

೨. ಜಿ ಎಸ್‌ಎಸ್ ಅವರು ದೇವರನ್ನು ಅನ್ವೇಷಿಸಿದ ಬಗೆ ಹೇಗೆ?

ಈ) ಸಂದರ್ಭದಲ್ಲಿ ವಿವರಿಸಿರಿ. (Explain the context)

೧. "ಹತ್ತಿರವಿದ್ದು ದೂರ ನಿಲ್ಲುವೆವು"

೨. "ಅಮೃತದ ಸವಿಯಿದೆ ನಾಲಿಗೆಗೆ"

೩. "ಪ್ರೀತಿ ಸ್ನೇಹಗಳ ಗುರುತಿಸದಾದೆವು ನಮ್ಮೊಳಗೆ"

ಉ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದದ್ದನ್ನು ಆಯ್ದು ಬರೆಯಿರಿ. (choose from the options given and fill in the blanks)

೧. ಕವಿ ಜಿಎಸ್‌ಎಸ್ ಅವರು ದೇವರನ್ನು .................. ರೂಪದಲ್ಲಿ ಕಂಡರು.

ಅ) ಗುಡಿ ಆ) ಕಲ್ಲು ಮಣ್ಣು ಇ) ಪ್ರೀತಿ ಸ್ನೇಹ ಈ) ಕೋಟೆ

೨. ಅಹಂ ಇರುವ ವ್ಯಕ್ತಿ ಜನರಿಗೆ ................ ಆಗುತ್ತಾನೆ.

ಅ) ಉಪಕಾರಿ ಆ) ಹತ್ತಿರ ಇ)ದೂರ ಈ)ಒಳ್ಳೆಯವನು

೩) ನಮ್ಮೊಳಗಿನ ಇಳಿಯನು ಕಲಕದೆ ಇದ್ದರೆ ನಾಲಗೆಗೆ ............................... ಇದೆ.

ಅ) ಹುಳಿ ಆ) ವಿಷ ಇ)ಒಗರು ಈ)ಅಮೃತ

೪) ಬದುಕಿನಲ್ಲಿ ................ ಎಂಬುದು ಕಷ್ಟ ಎಂದು ಕವಿ ಹೇಳುತ್ತಾರೆ.

ಅ) ಹೊಂದಾಣಿಕೆ ಆ) ಅಹಂ ಇ) ಹಿರಿಮೆ ಈ) ಮೋಹ

# ಭಾಷಾಭ್ಯಾಸ

ಅ) ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ. (Write the Synonyms)

ಗುಡಿ, ಸ್ನೇಹ, ಹತ್ತಿರ, ಬಂಧನ

ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ. (Write the opposite words)

ಪ್ರೀತಿ, ಕಷ್ಟ, ದೂರ, ಅಮೃತ, ಸಿಹಿ, ಬಂಧನ

ಈ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ. (Make your own sentence)

ದೇವರು, ಅಮೃತ, ಪ್ರೀತಿಸ್ನೇಹ, ಬಂಧನ, ಅಹಂ, ಹೊಂದಿಕೆ

ಉ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ. ( Split the words)

ನಮ್ಮೊಳಗೆ, ಸವಿಯಿದೆ, ಹತ್ತಿರವಿದ್ದು, ಗುಡಿಯೊಳಗೆ

ಊ) ಪದಗಳನ್ನು ಬಳಸಿ ಜೋಡಿ ಪದಗಳನ್ನು ಬರೆಯಿರಿ. (Refer the words in the bracket and pair the words)

| | |
|---|---|
| ಹೊಲ - | ಹೂವು - |
| ಗಿಡ - | ಕಳ್ಳ - |
| ಗುಡ್ಡ - | ಮಳೆ - |
| ಎಡ - | ರೀತಿ - |

(**ಸುಳಿವು**: ಮರ, ಹಣ್ಣು, ನೀತಿ, ಬೆಟ್ಟ, ಗದ್ದೆ, ಬೆಳೆ, ಸುಳ್ಳ, ಬಲ)

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ